***CC.849/2018***
***CW.11***
***PW.6***

## ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ ಕುಣಿಗಲ್

## ಸಿ.ಸಿ.849/2018

ಸಾಕ್ಷಿದಾರರ ಹೆಸರು : ಎಸ್ ನಾಗರಾಜು

ತಂದೆಯ ಹೆಸರು : ಲೇಟ್ ಸತ್ಯನಾರಾಯಣ ಶೆಟ್ಟಿ

ವಯಸ್ಸು : 66 ವರ್ಷ

ಉದ್ಯೋಗ : ನಿವೃತ್ತ ತಹಶೀಲ್ದಾರ್

ವಾಸ : ಬೆಂಗಳೂರು.

**ಸಾಕ್ಷಿಯನ್ನು ದಿನಾಂಕ: 13.11.2025ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ನಾನು ಮೇ 2017 ರಿಂದ ಜನವರಿ 2019 ರವರೆಗೆ ತಹಶೀಲ್ದಾರ್ ಆಗಿ ಕುಣಿಗಲ್ ನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. 2018ರಲ್ಲಿ ಚಾಸಾ.1 ರವರನ್ನು Flying squad ಅಧಿಕಾರಿಯಾಗಿ ಜಿಲ್ಲಾಧಿಕಾರಿಗಳು ನೇಮಿಸಿದ್ದು, ಸದರಿ ಆದೇಶವನ್ನು ಚಾಸಾ.1 ರವರಿಗೆ ಜಾರಿ ಮಾಡಿ ಅವರನ್ನು ಕರ್ತವ್ಯಕ್ಕೆ ನಿಯೋಜಿಸಿದ್ದೆ. ಸದರಿ ಜಾರಿ ಮಾಡಿದ ಆದೇಶದ ಪ್ರತಿಯಲ್ಲಿ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸ್ದಿದ್ದು, ಅದನ್ನು **ನಿಪಿ.5** ಎಂದು ಗುರುತಿಸಿದ್ದು, ಅದರಲ್ಲಿರುವ ಸಹಿಯನ್ನು **ನಿಪಿ.5(ಎ)** ಎಂದು ಗುರುತಿಸಲಾಯಿತು. ಮುಂದುವರೆದು, ತನಿಖಾಧಿಕಾರಿಯ ನಿವೇದನೆಯ ಮೇರೆಗೆ ಪಹಣಿಯನ್ನು ಸಹ ತನಿಖಾಧಿಕಾರಿಗೆ ಸಲ್ಲಿಸಿರುತ್ತೇನೆ. ಸದರಿ ಪಹಣಿ ನೀಡಿದ ಕುರಿತು ನಮ್ಮ ಕಚೇರಿಯಿಂದ ತನಿಖಾಧಿಕಾರಿಗೆ ಪತ್ರ ಕಳುಹಿಸಲಾಗಿತ್ತು. ಸದರಿ ಪತ್ರದಲ್ಲಿ ನಾನು ಸಹಿ ಮಾಡಿರುತ್ತೇನೆ. ಸದರಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸ್ದಿದ್ದು, ಅದನ್ನು **ನಿಪಿ.6**

ಎಂದು ಗುರುತಿಸಿದ್ದು, ಅದರಲ್ಲಿರುವ ಸಹಿಯನ್ನು **ನಿಪಿ.6(ಎ)** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎನ್ ಪಿ ವಕೀಲರಿಂದಃ</u>**

ನಾನು ಚಾಸಾ.1 ರವರಿಗೆ ಜಾರಿ ಮಾಡಿದ ಪತ್ರದಲ್ಲಿ ಜಿಲ್ಲಾಧಿಕಾರಿಯವರ ಜ್ಞಾಪನದ ದಾಖಲೆಯನ್ನು ಸಲ್ಲಿಸಿರುತ್ತೇನೆ. ನಿಪಿ.6ರ ಜೊತೆ ನೀಡಿದ ಪಹಣಿಗೂ ಘಟನಾ ಸ್ಥಳಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

**ಓ. ಹೇ.ಕೇ. ಸರಿ ಇದೆ.**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .**
**ಕುಣಿಗಲ್.**